ಎಂದು ಹೇಳಿ, ಎಷ್ಟು ಕಾಲೇಜುಗಳಿವೆ? ಕರ್ನಾಟಕದಲ್ಲಿ ಅಂಗೀಕೃತವಾಗಿರುವ ಈ ತರಹ ಎಷ್ಟು ಕಾಲೇಜುಗಳಿವೆ? ಯಾರಿಗೋಸ್ಕರ ಮಾಡುತ್ತಿದ್ದಾರೆ? ನಾನು ಒಬ್ಬ ಕಲಾವಿದನಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ವಿಶ್ವವಿದ್ಯಾಲಯಗಳನ್ನು ಇಷ್ಟೊಂದು ಮಾಡುತ್ತಿದ್ದೀರಲ್ಲಾ. . .

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ನರೇಂದ್ರಬಾಬುರವರೆ, ಇದಕ್ಕೆ affiliated college ನ concept ಇಲ್ಲ.

ಶ್ರೀ ನೆ.ಲ.ನರೇಂದ್ರ ಬಾಬು : ಎಷ್ಟಿದೆ ಹೇಳಿ?

ಶ್ರೀ ಅರವಿಂದ ಲಿಂಬಾವಳಿ : ಹಂಪಿ ಕನ್ನಡ ವಿಶ್ವವಿದ್ಯಾಲಯದ concept ಏನಿದೆಯೋ, ಆ concept ಅನ್ನು ಇದಕ್ಕೆ ತಂದಿದ್ದೇವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು
(ಅನುಬಂಧ–15)

4) ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕ, 2009
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಂಡನೆಗೇ ವಿರೋಧ ಮಾಡುತ್ತಿದ್ದೇವೆ.

ಅಧ್ಯಕ್ಷರು : ಈಗಾಗಲೇ ಮಂಡನೆ ಆಗಿಬಿಟ್ಟಿದೆ.

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಂಡನೆಯಾಗಿದೆ?

ಅಧ್ಯಕ್ಷರು : ಇಲ್ಲೇ ಮಂಡನೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಮಂಡನೆಯಾಗಿದೆಯೇ? ಆಯಿತು.

ಅಧ್ಯಕ್ಷರು : ಇದು ಪರ್ಯಾಲೋಚನೆ ಪ್ರಸ್ತಾವ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮೊದಲಿಗೆ ನಾನು, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳುತ್ತೇನೆ. ಏಕೆಂದರೆ, ಸಾರ್ವಜನಿಕವಾಗಿ ದೊಡ್ಡ ಚರ್ಚೆಯಾಗುತ್ತಿದೆ. ಸ್ವಲ್ಪ ದಿನ ಚರ್ಚೆಯಾಗಲಿ, ಇನ್ನೊಂದು ಸಲ ತೆಗೆದುಕೊಂಡು ಬನ್ನಿ,

ಸಂಸ್ಕೃತ ವಿಶ್ವವಿದ್ಯಾಲಯವು ಸಮಾಜಕ್ಕೆ ಅತ್ಯಂತ ಅಗತ್ಯವಾಗಿದೆ ಎಂದೇನಿಲ್ಲ. ದಯವಿಟ್ಟು ನಿಮ್ಮಲ್ಲಿ ನನ್ನ ಸಲಹೆ ಏನೆಂದರೆ, ಈ ಬಿಲ್ ಅನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಕ್ಕೆ ಬಿಡೋಣ. ಚರ್ಚೆಯಾಗಲಿ. ಮತ್ತೆ ಇನ್ನೊಂದು ಸಲ ಇಲ್ಲಿ ಪರ್ಯಾಲೋಚನೆಗೆ ತೆಗೆದುಕೊಂಡು ಬನ್ನಿ, ಚರ್ಚೆ ಮಾಡಿ ನಂತರ ತೀರ್ಮಾನಕ್ಕೆ ಬರೋಣ. ಅದನ್ನೇನು ಮಾಡದೇ ಈಗಾಗಲೇ ಇದರ ಬಗ್ಗೆ ಬಹಳ ಪರವಾಗಿ, ವಿರೋಧವಾಗಿ, ಎಲ್ಲಾ ಚರ್ಚೆಗಳೆಲ್ಲಾ ನಡೆಯುತ್ತಿವೆ. ಬಹಳ ವಿದ್ವಾಂಸರೂ ಕೂಡ ಇದರ ಬಗ್ಗೆ ಪರವಾಗಿಯೂ ಇದ್ದಾರೆ, ವಿರೋಧವಾಗಿಯೂ ಇದ್ದಾರೆ. ಇದು ಸಾರ್ವಜನಿಕವಾಗಿ ಚರ್ಚೆಯಾದ ಮೇಲೆ, ಒಂದು ಅಭಿಪ್ರಾಯಕ್ಕೆ ಬಂದ ಮೇಲೆ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಂಡು ಬನ್ನಿ, ನಂತರ ಅದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ಆದುದರಿಂದ ಇದನ್ನು ಆತುರಾತುರವಾಗಿ ಮಾಡಬೇಕಾಗಿರುವ ಅಗತ್ಯವಿಲ್ಲ.

ಶ್ರೀ ಸಿ. ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಪೂರ್ವಗ್ರಹ ಪೀಡಿತ ಗ್ರಹಚಾರ ಎನ್ನುವ ಕೆಲಸ ಆಗಬಾರದು. ಜರ್ಮನ್ ದೇಶದವರು ಸಂಸ್ಕೃತ ವಿಶ್ವವಿದ್ಯಾಲಯವನ್ನು ಅಲ್ಲಿ ಪ್ರಾರಂಭ ಮಾಡುತ್ತಾರೆ, ಅಮೇರಿಕಾದ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತಕ್ಕೆ ಪ್ರಾಧ್ಯಾನತೆ ಕೊಟ್ಟು ಅಲ್ಲಿ ಅಭ್ಯಾಸ ಮಾಡಲಿಕ್ಕೆ ಮಾಡುತ್ತಾರೆ. ನಾಲ್ಕಾರು ಪೂರ್ವಗ್ರಹ ಪೀಡಿತರಾಗಿ ವರ್ತನೆ ಮಾಡಬಾರದು. ಇದಕ್ಕೆ ಅವಕಾಶ ಕೊಡಬೇಕು. ನೀವು ಮಂಡಿಸಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ರವಿಯವರೆ, ಆಯಿತು ನಿಮ್ಮ ಅಭಿಪ್ರಾಯ ಹೇಳಿ. ಇದರಲ್ಲಿ ಪೂರ್ವಗ್ರಹವೂ ಇಲ್ಲ. ಪಶ್ಚಿಮಗ್ರಹವೂ ಇಲ್ಲ.

ಶ್ರೀ ಸಿ. ಟಿ. ರವಿ : ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ನೀವ್ಯಾರು ವಿರೋಧ ಮಾಡಿದ್ದೀರೆಂದು ನಾನು ಹೇಳುತ್ತಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಒಟ್ಟಿನಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು ಅಷ್ಟೆ.

ಶ್ರೀ ಸಿ. ಟಿ. ರವಿ : ನನ್ನ ಅಭಿಪ್ರಾಯವನ್ನು ಮಂಡಿಸುವುದಕ್ಕೆ ನನಗೆ ಹಕ್ಕು ಇದೆ, ನಾನು ಹೇಳಿದ್ದೇನೆ.

Sri Siddaramaiah : Is it necessary for Karnataka ಎನ್ನುವುದು ಪ್ರಶ್ನೆಯಾಗಬೇಕಾಗುತ್ತದೆ. ಇದರ ಬಗ್ಗೆ ರಾಜ್ಯಾದ್ಯಂತ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಇನ್ನೂ ಚರ್ಚೆಯಾಗಲಿ, ಇನ್ನೊಮ್ಮೆ ಈ

ವಿಧೇಯಕವನ್ನು ತನ್ನಿ, ಮುಂದಿನ ಸೆಪ್ಟೆಂಬರ್‌ನಲ್ಲಿ ಮತ್ತೆ ಅಧಿವೇಶನದಲ್ಲಿ ಸೇರುತ್ತೇವಲ್ಲ, ಆಗ ತೆಗೆದುಕೊಂಡು ಬನ್ನಿ, ಚರ್ಚಿಸೋಣ.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ, ಶಿವಕುಮಾರ್‌ರವರು ಶ್ಲೋಕ ಹೇಳಿದಾಗ ಎಲ್ಲರೂ ಚಪ್ಪಾಳೆ ತಟ್ಟಿದ್ದರು.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷದ ಎಕ್ಸಿಕ್ಯೂಟಿವ್ ಅಧ್ಯಕ್ಷರು, ಅವರೇ ಸಂಸ್ಕೃತ ಬಗ್ಗೆ ಅಧ್ಯಯನ ಮಾಡುತ್ತಿರುವುದು ನಮಗೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ ಮತ್ತು ಖಂಡಿತವಾಗಿಯೂ ಹೇಳುತ್ತೇನೆ. ಇದರ ಬಗ್ಗೆ ಯೂನಿವರ್ಸಿಟಿ ಸ್ಥಾಪಿಸಿ ಅದಕ್ಕೆ ಪ್ರೋತ್ಸಾಹ ಕೊಡುವುದೇನಿದೆ, ಅದು ತೀರಾ ಅವಶ್ಯಕತೆ ಇದೆ ಮತ್ತು ನಾವು ಅದನ್ನು ಪ್ರೋತ್ಸಾಹಿಸಿ, ಬೆಂಬಲಿಸ ಬೇಕಾಗುತ್ತದೆ. ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಬಿಲ್‌ಗಳನ್ನೆಲ್ಲಾ ಪಾಸ್ ಮಾಡಿಕೊಟ್ಟಿದ್ದೇವೆ. ಈಗ ರಾತ್ರಿ 11.00 ಗಂಟೆಯಾಗುತ್ತಿದೆ. ಇನ್ನೂ ನಿಯಮ 69ರಡಿ ಮತ್ತು ಗಮನ ಸೆಳೆಯುವ ಸೂಚನೆಗಳಡಿ ಪ್ರಸ್ತಾಪಿಸಬೇಕಾದ ಸಾಕಷ್ಟು ವಿಷಯಗಳಿವೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹೇಳಿದಂತೆ, ಇವೆಲ್ಲವನ್ನೂ ವಾಪಸ್ಸು ತೆಗೆದುಕೊಂಡು ಮುಂದಿನ ಸಲ ತನ್ನಿ. ಈ ವಿಧೇಯಕಕ್ಕೆ ಸಂಬಂಧಿಸಿದಂತೆ 44 ಪುಟಗಳಿವೆ.

(ಗೊಂದಲ)

ಅಧ್ಯಕ್ಷರು : ಅರವಿಂದ ಲಿಂಬಾವಳಿಯವರೆ, ಈ ವಿಧೇಯಕವನ್ನು ಮುಂದಿನ ಸಲ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ವಿಧೇಯಕವನ್ನು ಓದಬೇಕಾಗಿದೆ, ಆನಂತರ ಚರ್ಚೆಯಾಗಲಿ.

(ಗೊಂದಲ)

ಅಧ್ಯಕ್ಷರು : ವಿಧೇಯಕವನ್ನು ಮುಂದಿನ ಅಧಿವೇಶನಕ್ಕೆ ತೆಗೆದು ಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಾಗಿದೆ.

ಶ್ರೀ ಅರವಿಂದ ಲಿಂಬಾವಳಿ : ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಏನಿದೆ ಎಂಬುದನ್ನು ಹೇಳುತ್ತೇನೆ. ಎಷ್ಟೋ ವಿದ್ಯಾರ್ಥಿಗಳಿಗೆ ಅನ್ಯಾಯ ವಾಗುತ್ತದೆ. ಆದಕಾರಣ, ಈ ವಿಧೇಯಕವನ್ನು ತೆಗೆದುಕೊಳ್ಳಿ. ದೇಶದ 12 ರಾಜ್ಯಗಳಲ್ಲಿ ವಿಶ್ವವಿದ್ಯಾನಿಲಯಗಳಿವೆ. ಆ ವಿಶ್ವವಿದ್ಯಾನಿಲಯಗಳ ಮುಖಾಂತರ ಬೇರೆ ಬೇರೆ ಉನ್ನತ ಶಿಕ್ಷಣಕ್ಕೋಸ್ಕರ, ಸಂಸ್ಕೃತದ ವಿಶೇಷ ಅಧ್ಯಯನಕ್ಕೋಸ್ಕರ ವಿದ್ಯಾರ್ಥಿಗಳು ಬೇರೆ ಬೇರೆ ಕಡೆಗಳಿಗೆ ಹೋಗುತ್ತಿದ್ದಾರೆ. ಕರ್ನಾಟಕದ ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಿದ್ದಾರೆ. ಕರ್ನಾಟಕದ ಮೂಲ ಸಂಸ್ಕೃತ ಅಧ್ಯಯನ ಮಾಡಿರುವ, ಪಾಂಡಿತ್ಯವಿರುವ ಬಹಳ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಅವಕಾಶದಿಂದ ಅನೇಕ ವರ್ಷಗಳಿಂದ ವಂಚಿತರಾಗುತ್ತಿದ್ದೇವೆ. ಇಲ್ಲಿ 12 ಮಹಾ ವಿದ್ಯಾಲಯಗಳಿವೆ, 250 ಪಾಠಶಾಲೆಗಳಿವೆ. ಈ ಪಾಠಶಾಲೆಗಳಲ್ಲಿ ಓದಿ ಹೊರ ಬರುವ ವಿದ್ಯಾರ್ಥಿಗಳಿಗೆ ರಾಜ್ಯದ ಬೇರೆಡೆಗೆ, ದೇಶದ ಬೇರೆಡೆಗೆ ಹೋದರೆ ಅದರಲ್ಲೂ ಮಾನ್ಯತೆ ಸಿಗದಿರುವ ಪ್ರೈಮರಿ ಸ್ಕೂಲ್‌ನಡಿ ಅವರುಗಳು ಓದುತ್ತಿದ್ದಾರೆ. ಅಂತಹ ಪರಿಸ್ಥಿತಿ ಇದೆ. ಆ ಹಿನ್ನೆಲೆಯಲ್ಲಿ ಮತ್ತು ಸಂಸ್ಕೃತದ ಬಗ್ಗೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತೇ ಇದೆ. ಮಹಾಭಾರತವನ್ನು ವೇದವ್ಯಾಸರು, ಅವರು ಯಾರೆಂಬುದು ತಮಗೆ ಗೊತ್ತು. ರಾಮಾಯಣ ರಚಿಸಿದ್ದು ವಾಲ್ಮೀಕಿ, ಅದೇ ರೀತಿ ಗಾಯತ್ರಿ ಮಂತ್ರ ರಚಿಸಿದ್ದು ವಿಶ್ವಾಮಿತ್ರರು, ಅದೇ ರೀತಿ ಸಂಸ್ಕೃತದಲ್ಲಿ ಶಾಕುಂತಲಾ ನಾಟಕ ರಚಿಸಿದರು ಮಹಾಕವಿ ಕಾಳಿದಾಸರು. ಹೀಗಾಗಿ ಸಂಸ್ಕೃತ...

ಶ್ರೀ ಟಿ.ಬಿ.ಜಯಚಂದ್ರ : ಸಂಸ್ಕೃತ ನಿಮಗೆ ಬರುತ್ತದೆಯೇ?

ಶ್ರೀ ಅರವಿಂದ ಲಿಂಬಾವಳಿ : ಸಂಸ್ಕೃತ ನನಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ, ಡಿ.ಕೆ.ಶಿವಕುಮಾರ್‌ರವರಿಗೆ ಇತ್ತೀಚೆಗೆ ಸಂಸ್ಕೃತ ಬರುತ್ತಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅವರೂ ಚರ್ಚೆಗೆ ಬರಲಿ, ಅವರೂ ಚರ್ಚೆಯಲ್ಲಿ ಭಾಗವಹಿಸಲಿ.

ಶ್ರೀ ಅರವಿಂದ ಲಿಂಬಾವಳಿ : ನಮ್ಮ ವಿದ್ಯಾರ್ಥಿಗಳು.....

ಶ್ರೀ ಸಿದ್ದರಾಮಯ್ಯ : ನೀವು explain ಮಾಡುತ್ತಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ಹೌದು. ನಮ್ಮ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಏಕೆ ಹಠ ಮಾಡುತ್ತಿದ್ದೀರಿ?

ಶ್ರೀ ಅರವಿಂದ ಲಿಂಬಾವಳಿ : ಹಠ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಇದರ ಬಗ್ಗೆ ಸ್ವಲ್ಪ ಚರ್ಚೆಯಾಗಲಿ ಬಿಡಿ. ಸಾರ್ವಜನಿಕವಾಗಿ ಚರ್ಚೆಯಾದ ಬಳಿಕ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. No, No, ವಿಧೇಯಕವನ್ನು ನೀವು ತರಲೇಬೇಕೆನ್ನುವುದಾದರೆ, ಮುಂದಿನ ಅಧಿವೇಶನಕ್ಕೆ ತೆಗೆದುಕೊಂಡು ಬನ್ನಿ, ಚರ್ಚಿಸೋಣ. ನಾವು ಸ್ವಲ್ಪ ಅಧ್ಯಯನ ಮಾಡಿಕೊಂಡು ಬರುತ್ತೇವೆ, ಚರ್ಚಿಸೋಣ.

ಶ್ರೀ ಅರವಿಂದ ಲಿಂಬಾವಳಿ : ನಾನು ಹಠ ಮಾಡುತ್ತಿಲ್ಲ. ನಮ್ಮ ಸಮಸ್ಯೆ ಏನೆಂದರೆ, ನಮ್ಮ ಕರ್ನಾಟಕದ ವಿದ್ಯಾರ್ಥಿಗಳು.....

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಸ್ವಲ್ಪ ಡಿಬೇಟ್ ಆಗಲಿ, ಅನಂತರ ಈ ವಿಧೇಯಕವನ್ನು ತನ್ನಿ.

ಅಧ್ಯಕ್ಷರು : ಆಯಿತು, ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. ಬಹಳಷ್ಟು ಶಾಸಕರು ಈ ಕುರಿತಾದ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ, ಈಗ ಸಮಯಭಾವ ಇದೆ. ಆ ದೃಷ್ಟಿಯಿಂದ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. ರೇವಣ್ಣನವರೆ, ಈಗ 10.45 ಗಂಟೆಯಾಗಿದ್ದು, ಉಳಿದಿರುವ ಕಲಾಪವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಇದನ್ನು ಮುಂದಕ್ಕೆ ಹಾಕಿದ್ದೇನೆ. ಸಮಯಾಭಾವ ಇದ್ದುದ್ದರಿಂದ ಒಂದು ಬಿಲ್ ಅನ್ನು ಮುಂದಕ್ಕೆ ಹಾಕಿದ್ದೇನೆ. ಇನ್ನು ಸಾಕು, ಈಗ ಮುಗಿಸೋಣ, ಉಳಿದುದನ್ನು ಮುಂದಿನ ವಿಶೇಷ ಅಧಿವೇಶನದಲ್ಲಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ಹೇಳಿಬಿಡುತ್ತೇನೆ. ಆನಂತರ, ನೀವು ತೀರ್ಮ ಕೊಡಿ.

ಅಧ್ಯಕ್ಷರು : ಆಯಿತು, ಈಗ ಮುಗಿಸೋಣ. ಈಗಾಗಲೇ ನಾನು ಹೇಳಿದ್ದೇನೆ. ತಾವು ಬ್ರೀಫ್ ಮಾಡಿಬಿಡಿ. ಚರ್ಚೆ ಮಾಡಬೇಕೆಂದರೆ, ಇನ್ನು ಒಂದು ಗಂಟೆಯಾದರೂ ಬೇಕಾಗುತ್ತದೆ. ಏಕೆ ಹಠ ಮಾಡುತ್ತೀರಿ? ಇವತ್ತು ಆಗುವುದಿಲ್ಲವೆಂದರೆ ಮುಂದಿನ ಅಧಿವೇಶನದಲ್ಲಿ ಆಗುತ್ತದೆ. ಮಂಡನೆಯಾಗಿದೆ. ಈಗ ಚರ್ಚೆ ಪ್ರಾರಂಭಿಸಿದರೆ ಇನ್ನೂ ಒಂದು ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈಗ ಈ ಕಡತಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಲೂಟಿಯಾಗುತ್ತಿದೆ. ಮಹಿಳಾ ಮತ್ತು ಮಕ್ಕಳ